ದಿ: 20-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು**: ಪ್ರತಿವಾದಿಗಳ ಪರ ಶ್ರೀಯುತ ಎ.ಜಿ.ಎನ್. ವಕೀಲರಿಂದ.

ಜೋಗಪ್ಪ ಎನ್ನುವವರಿಗೆ ದೊಡ್ಡಮುನಿಶ್ಯಾಮಿ, ಚಿಕ್ಕಮುನಿಶ್ಯಾಮಿ ಮತ್ತು ಮುನಿಯಪ್ಪ ಎನ್ನುವ ಮೂರು ಜನ ಮಕ್ಕಳು ಎಂದರೆ ಸರಿ. ಸದರಿ ಮೂರು ಜನರ ಮಕ್ಕಳ ಪೈಕಿ ಚಿಕ್ಕ ಮುನಿಶ್ಯಾಮಿರವರು ನನ್ನ ತಾತ ಎನ್ನುತ್ತಾರೆ. ಸದರಿ ಚಿಕ್ಕಮುನಿಶ್ಯಾಮಿ ರವರಿಗೆ ಹನುಮಂತರಾಯಪ್ಪ ಎನ್ನುವ ಒಬ್ಬ ಮಗ ಮತ್ತು ಲಕ್ಷ್ಮಮ್ಮ ಹಾಗೂ ಜಯಮ್ಮ ಎನ್ನುವ ಇಬ್ಬರು ಹೆಣ್ಣು ಮಕ್ಕಳು ಇದ್ದರು. ನಾನು ಲಕ್ಷ್ಮಮ್ಮರವರ ಮಗನಾಗಿರುತ್ತೇನೆ. ಹನುಮಂತರಾಯಪ್ಪರವರಿಗೆ ಮಕ್ಕಳು ಇರುತ್ತಾರೆ. ಸದರಿ ಜೋಗಪ್ಪನ ಮಕ್ಕಳು ತಮ್ಮ ಕುಟುಂಬದ ಆಸ್ತಿಯ ವಿಭಾಗದ ಕುರಿತು ದಾವೆ ದಾಖಲಿಸಿದ್ದರು ಎಂದರೆ ಸರಿ. ಸದರಿ ಜೋಗಪ್ಪರವರ ಮಕ್ಕಳು ದಾಖಲಿಸಿದ್ದ ದಾವೆಯ ಕ್ರಮಸಂಖ್ಯೆ ಓ.ಎಸ್. 525/1962 ಎಂದರೆ ಸರಿ. ಸದರಿ ದಾವೆಯಲ್ಲಿ ಜೋಗಪ್ಪನವರ ಎಲ್ಲಾ ಮಕ್ಕಳ ನಡುವೆ ಆಸ್ತಿಗಳು ವಿಭಾಗ ಆಗಬೇಕೆಂದು ತೀರ್ಮಾನ ಆಗಿತ್ತು ಎಂದರೆ ಸರಿ. ಸದರಿ ಜೋಗಪ್ಪರವರ ಮಗನಾದ ಮುನಿಯಪ್ಪರವರು ತನ್ನ ಹಿಸ್ಸೆಗೆ ಬಂದ ಜಮೀನ್ನನ್ನು ಗುರುತಿಸಿಕೊಡುವಂತೆ ಅಂತಿಮ ಅಮಲಜಾರಿ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿ. ಆ ರೀತಿ ಅಂತಿಮ ಅಮಲಜಾರಿ ಪ್ರಕರಣ ದಾಖಲಿಸಿದ ದಿನದಿಂದ ಇಲ್ಲಿಯವರೆಗೂ ಯಾವುದೇ ವಿಂಗಡನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನ್ಯಾಯಾಲಯದ ತೀರ್ಪಿನಂತೆ ವಿಂಗಡನೆ ಆಗಿರುತ್ತದೆ. ಆ ರೀತಿ ಯಾವ ಪ್ರಕರಣದಲ್ಲಿ ಮತ್ತು ಯಾವ ಸಾಲಿನಲ್ಲಿ ವಿಂಗಡನೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ರೀತಿ ವಿಂಗಡನೆ ಆದ ಕುರಿತು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ ಮತ್ತು ಅವುಗಳು ನನ್ನ ಬಳಿ ಇರುವುದಿಲ್ಲ. ಸದರಿ ಜೋಗಪ್ಪರವರ ಮಕ್ಕಳು ಕಂದಾಯ ಇಲಾಖೆಯಲ್ಲಿ ತಮ್ಮ ಹೇಳಿಕೆಗಳನ್ನು ನೀಡಿ ತಮ್ಮ ಪಾಲಿನ ಸ್ವಾಧೀನಾನುಭವದ ಜಮೀನುಗಳನ್ನು ತಮ್ಮ ಹೆಸರಿಗೆ ವಿಂಗಡನೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಜೋಗಪ್ಪರವರ ಕುಟುಂಬದ ಜಮೀನುಗಳು ಅವರ ಮಕ್ಕಳ ಹೆಸರಿನಲ್ಲಿ ನಮೂದಾಗಿರುತ್ತದೆ ಎಂದರೆ ಸರಿ.

2. ಸರ್ವೆ ನಂ.3/2 ಜಮೀನು 2.06 ಎಕರೆ ವಿಸ್ತೀರ್ಣ ಹೊಂದಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ.3/2 ಜಮೀನಿನ ಒಟ್ಟು ವಿಸ್ತೀರ್ಣದ ಪೈಕಿ 0.27 ಗುಂಟೆ ಜಮೀನು ಹರಿಜನರ ಕಾಲೋನಿಗೆ ಸ್ವಾಧೀನ ಮಾಡಿಕೊಡಲಾಗಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ.3/2 ವಿಸ್ತೀರ್ಣ 2.6 ಎಕರೆ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ 27 ಗುಂಟೆ ಜಮೀನ್ನನ್ನು ಸ್ವಾಧೀನ ಮಾಡಿಕೊಳ್ಳಲಾಗಿತ್ತು ಎಂದರೆ ಸರಿ. ಆ ರೀತಿ ಸ್ವಾಧೀನ ಪಡಿಸಿಕೊಳ್ಳಲಾದ ಜಮೀನಿನಲ್ಲಿ ಹರಿಜನರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದು ಮತ್ತು ಹಂಚಿಕೆ ಪಡೆದವರು ಸದರಿ ನಿವೇಶನಗಳಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ಜೋಗಪ್ಪನ ಮಕ್ಕಳು ಭೂ ಸ್ವಾಧೀನವಾದ 0.27 ಗುಂಟೆ ಜಮೀನ್ನನ್ನು ಸೇರಿಸಿಕೊಂಡು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಜೋಗಪ್ಪನ ಮಕ್ಕಳು ಭೂ ಸ್ವಾಧೀನವಾದ ಜಮೀನ್ನನ್ನು ಸೇರಿಸಿ ವಿಭಾಗ ಮಾಡಿಕೊಂಡ ಮೇರೆಗೆ ಪ್ರತಿವಾದಿಗಳ ತಂದೆ ಮತ್ತು ಪ್ರತಿವಾದಿಗಳು ಡಿ.ಡಿ.ಎಲ್.ಆರ್.ರವರ ಮುಂದೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ

ಪ್ರತಿವಾದಿಗಳು ಅರ್ಜಿ ಸಲ್ಲಿಸಿದ ನಂತರ ಭೂ ಸ್ವಾಧೀನವಾಗಿದ್ದ ಜಮೀನಿಗೆ ಸಂಬಂಧಿಸಿದ ಎಲ್ಲಾ ಹಿಸ್ಸಾಗಳನ್ನು ವಜಾ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಅವರ ಅಕ್ಕ ತಂಗಿಯರು ಡಿ.ಡಿ.ಎಲ್.ಆರ್ ರವರ ಆದೇಶದ ವಿರುದ್ಧ ಜೆ.ಡಿ.ಎಲ್.ಆರ್ ರವರಿಗೆ ಮೇಲ್ಮನವಿ ಸಲ್ಲಿಸಿದ್ದು ಮತ್ತು ಅದು ವಜಾ ಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ದಿನ ನನ್ನನ್ನು ನ್ಯಾಯಾಲಯಕ್ಕೆ ನಂಜಮ್ಮರವರು ಕರೆದುಕೊಂಡು ಬಂದಿರುತ್ತಾರೆ. ನಾನು ಪ್ರಸ್ತುತ ದಾವೆಯಲ್ಲಿ ಸಾಕ್ಷ್ಯ ನುಡಿಯುವ ಪೂರ್ವದಲ್ಲಿ ಪ್ರಸ್ತುತ ದಾವೆಯ ಕುರಿತು ಮತ್ತು ಹಾಜರುಪಡಿಸಿರುವ ದಾಖಲೆಗಳ ಕುರಿತು ಕೇಳಿ ತಿಳಿದುಕೊಂಡಿರುತ್ತೇನೆ. ಆ ರೀತಿ ನಾನು ಪ್ರಸ್ತುತ ದಾವೆಯ ಕುರಿತು ತಿಳಿದುಕೊಳ್ಳುವ ಸಮಯದಲ್ಲಿ ಡಿ.ಡಿ.ಎಲ್.ಆರ್. ಮತ್ತು ಜೆ.ಡಿ.ಎಲ್.ಆರ್. ರವರ ಆದೇಶದ ಕುರಿತು ತಿಳಿದುಕೊಂಡಿರುವುದಿಲ್ಲ. ನಾನು ಪ್ರಸ್ತುತ ವರ್ಷವಾದ 2024 ರ ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ದಾವಾ ಆಸ್ತಿಯ ಪಹಣಿ ಪತ್ರಿಕೆ ವಿಜಯ ಕುಮಾರಿರವರ ಹೆಸರಿನಲ್ಲಿ ಬರುತ್ತಿರುತ್ತದೆ. ದಾವಾ ಅನುಸೂಚಿ ಆಸ್ತಿ ಸರ್ವೆ 3/2 ಬಿ6 ವಿಸ್ತೀರ್ಣ 4.3/4 ಜಮೀನಿನ ಪ್ರಸ್ತುತ ವರ್ಷದ ಪಹಣಿ ಪತ್ರಿಕೆಯನ್ನು ನೋಡಿರುವುದಿಲ್ಲ. 2023 ನೇ ಸಾಲಿನಲ್ಲಿ ಡಿ.ಡಿ.ಎಲ್.ಆರ್. ಆದೇಶದಂತೆ ದಾವಾ ಆಸ್ತಿ ಸರ್ವೆ ನಂಬರ್ ನ ಎಲ್ಲಾ ಹಿಸ್ಸಾಗಳನ್ನು ರದ್ದು ಪಡಿಸಿ ಸರ್ವೆ ನಂ.3/2 ಎಂದು ಮರು ಸರ್ವೆ ನಂಬರ್ ನೀಡಲಾಗಿರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ನಿ.ಡಿ.೧ ದಾಖಲೆಯು ಸದರಿ ಮರು ಸರ್ವೆ ನಂಬರ್ ಮಾಡಲಾದ ಜಮೀನಿನ ಪಹಣಿ ಪತ್ರಿಕೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯಲ್ಲಿ ನನ್ನ ಮತ್ತು ಇತರೆ ವಾದಿಗಳ ಹೆಸರುಗಳು ಬರುತ್ತಿವೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.